ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/ಹೆಚ್.ಆರ್.ಎಂ.ಎಸ್/ಎನ್.ಪಿ.ಎಸ್/04/2021-22 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು, ದಿನಾಂಕ: 25/05/2023

# ಸುತ್ತೋಲೆ

**ವಿಷಯ:** ದಿನಾಂಕ:01/04/2006 ರಂದು ಮತ್ತು ತದನಂತರ ಸೇವೆಗೆ ಸೇರಿರುವ ಎನ್.ಪಿ.ಎಸ್ ನೌಕರರು ಪ್ರಾನ್ ಸಂಖ್ಯೆ ಹೊಂದಿಲ್ಲದಿರುವ ಕುರಿತು.

**ಉಲ್ಲೇಖ:** ಖಜಾನೆ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ: DoT/NPSoPRAN(Dot)/2/2023 ದಿನಾಂಕ:04/03/2023

*****

ಸರ್ಕಾರದ ಸುತ್ತೋಲೆ ಸಂಖ್ಯೆ: FD(Spl) 1 PEN 2010 ದಿನಾಂಕ: 10/01/2012 ರಲ್ಲಿ ಹೊಸದಾಗಿ ಸೇವೆಗೆ ಸೇರುವ ಎನ್.ಪಿ.ಎಸ್. ನೌಕರರು ಸೇವೆಗೆ ಸೇರಿದ ಒಂದು ತಿಂಗಳ ಅವಧಿಯಲ್ಲಿ ಪ್ರಾನ್ ಸಂಖ್ಯೆ ಪಡೆದು ಕಡ್ಡಾಯವಾಗಿ ಪ್ರಥಮ ವೇತನವನ್ನು ಎನ್.ಪಿ.ಎಸ್. ವಂತಿಗೆ ಕಟಾವಣೆಯೊಂದಿಗೆ ಸೆಳೆಯಬೇಕು ಎಂದು ಆದೇಶಿಸಲಾಗಿದೆ. ತಮ್ಮ ಅಧೀನದ ನೌಕರರು ಸೇವೆಗೆ ಸೇರಿದ ಒಂದು ತಿಂಗಳ ಅವಧಿಯಲ್ಲಿ ಪ್ರಾನ್ ಸಂಖ್ಯೆ ಪಡೆಯುವಂತೆ ಕ್ರಮ ಕೈಗೊಳ್ಳುವುದು ಸಂಬಂಧಿಸಿದ ಡಿಡಿಓರವರ ಜವಾಬ್ದಾರಿಯಾಗಿರುತ್ತದೆ.

ಉಲ್ಲೇಖಿತ ಖಜಾನೆ ಆಯುಕ್ತರ ಕಛೇರಿಯ ಪತ್ರದಲ್ಲಿ ಈ ಮೇಲಿನ ಅಂಶವನ್ನು ಪುನರುಚ್ಛರಿಸುತ್ತಾ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ಕಾಲೇಜು ಶಿಕ್ಷಣ ಇಲಾಖೆಯ 27 ನೌಕರರು ಇಲ್ಲಿಯವರೆಗೆ ಪ್ರಾನ್ ಸಂಖ್ಯೆ ಪಡೆಯದೇ ವೇತನ ಸೆಳೆಯುತ್ತಿರುವುದು ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ. ಇದರಿಂದಾಗಿ ನೌಕರರು ನಿವೃತ್ತಿ ಸಮಯದಲ್ಲಿ ಪಡೆಯುವ ಪಿಂಚಣಿ ಮೊತ್ತ ಕಡಿಮೆಯಾಗುವುದಲ್ಲದೆ ನೌಕರರ ಪಿಂಚಣಿ ಕಾರ್ಪಸ್ ಸಂಗ್ರಹಣೆಯ ಮೊತ್ತವು ಇಳಿಕೆಯಾಗುತ್ತದೆ. ಎನ್.ಪಿ.ಎಸ್ ನೋಡಲ್ ಅಧಿಕಾರಿಯಾದ ಡಿಡಿಓರವರು ತಮ್ಮ ಅಧೀನದ ನೌಕರರಿಗೆ ಸಕಾಲದಲ್ಲಿ ಪ್ರಾನ್ ಸಂಖ್ಯೆ ಪಡೆಯಲು ಕ್ರಮವಹಿಸದ ಕಾರಣ ಈ ರೀತಿ ಉಂಟಾಗಿರುವ ನಷ್ಟಕ್ಕೆ ಸಂಬಂಧಿಸಿದ ಡಿಡಿಓರವರೇ ನೇರ ಹೊಣೆಯಾಗಿರುತ್ತಾರೆ ಎಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಆದುದರಿಂದ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿರುವ ಕೆ.ಜಿ.ಐ.ಡಿ ಸಂಖ್ಯೆ ಹೊಂದಿರುವ ನೌಕರರಿಗೆ ತುರ್ತಾಗಿ ಪ್ರಾನ್ ಒದಗಿಸುವಂತೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಡಿಡಿಓಗಳಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಒಂದೊಮ್ಮೆ ಸದರಿ ನೌಕರರು ತಮ್ಮ ಕಾಲೇಜಿನಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿಲ್ಲದ ಪಕ್ಷದಲ್ಲಿ, ಸದರಿ ನೌಕರರು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ವಿವರಗಳನ್ನು ಅಥವಾ ರಾಜೀನಾಮೆ/ಮರಣ/ಇತರ ಇಲಾಖೆಗೆ

ನೇಮಕಾತಿ ಇತ್ಯಾದಿಗಳಿಂದ ಪ್ರಾನ್ ಪಡೆಯದ ಪಕ್ಷದಲ್ಲಿ ಸದರಿ ವಿವರಗಳನ್ನು ನೀಡಲು ಸೂಚಿಸಲಾಗಿದೆ. ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಸಂಬಂಧಿಸಿದ ಡಿ.ಡಿ.ಓ ಗಳು **ದಿನಾಂಕ: 09/06/2023** ರೊಳಗಾಗಿ ಕೇಂದ್ರ ಕಛೇರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

ಅಡಕ: ಉಲ್ಲೇಖಿತ ಸರ್ಕಾರದ ಸುತ್ತೋಲೆ
ಅನುಬಂಧ 1

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:-

1. ಅನುಬಂಧ-1 ರ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಖಜಾನೆ ಆಯುಕ್ತರು, ಖಜಾನೆ ಆಯುಕ್ತರ ಕಾರ್ಯಾಲಯ, ರಾಷ್ಟ್ರೀಯ ಪಿಂಚಣಿ ಯೋಜನೆ ಘಟಕ, 5ನೇ ಮಹಡಿ, ಕೆ.ಪಿ.ಸಿ.ಎಲ್ ಗ್ರೀನ್ ಬಿಲ್ಡಿಂಗ್, ಪ್ಯಾಲೇಸ್ ರಸ್ತೆ, ಬೆಂಗಳೂರು-560001 - ಮಾಹಿತಿಗಾಗಿ
2. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ, ಬೆಂಗಳೂರು - ವೆಬ್‌ಸೈಟ್‌ನಲ್ಲಿ ಸುತ್ತೋಲೆಯನ್ನು ಪ್ರಕಟಿಸಲು.
3. ಕಛೇರಿ ಪ್ರತಿ.

ಅನುಬಂಧ - 1

DEPARTMENT OF COLLEGIATE EDUCATION

LIST OF EMPLOYEES WITHOUT PRAN NUMBER

| Sl. No. | KGID number | Name of the Employee | DDO Code | College name | date of entry into service | date of birth |
|---|---|---|---|---|---|---|
| 1 | 1938792 | Bhimanagouda D Konnur | 2603EC0001 | Government First Grade College, Nargund | 13-09-2017 | 19-02-1977 |
| 2 | 2182157 | Kavita S Kusugal | 2206EC0001 | Government First Grade College, Khanapura, Belgaum | 27-12-2007 | 18-06-1978 |
| 3 | 2244209 | Nagesh | 1003EC0001 | Government First Grade College, Yalanduru, Chamrajnagar | 08-10-2009 | 12-06-1972 |
| 4 | 2278242 | Sumanth S Hiremath | 2200EC0009 | Government First Grade College, KK Koppa, Belgaum | 04-09-2009 | 28-10-1982 |
| 5 | 2314974 | Anand Mallasaraj Dodamani | 2502EC1798 | Government First Grade College, Gudigeri | 08-07-2010 | 01-06-1981 |
| 6 | 236592 | Kavitha | 0806EC0001 | Government First Grade College, Pavagada | 03-09-2009 | 01-06-1970 |
| 7 | 2096121 | Pavithra R H | 0900EC0016 | Government First Grade College, Siddartha Layout (Mysore) | 29-10-2007 | 19-07-1981 |
| 8 | 2352489 | Rupesh Kumar A | 0402EC9176 | Government First Grade College, , Kanakapura | 04-02-2008 | 30-09-1981 |
| 9 | 2307351 | Srinivasa Murthy M D | 3404EC0001 | Government First Grade College, Hagaribommonahalli | 05-09-2009 | 20-07-1982 |
| 10 | 454787 | Gani Shrishail Ramappa | 0900EC0005 | Maharani's Science College for Women, Mysore | 05-11-2007 | 01-06-1977 |
| 11 | 724809751 | Geetha M S | 0903EC0003 | Government First Grade College, K R Nagar (Womens) | 23-12-2009 | 10-08-1980 |
| 12 | 9448569362 | Ravindra Singh | 3651EC0002 | Government First Grade College, Mudagallu (Lingasuguru) | 08-09-2009 | 08-08-1966 |
| 13 | 908070881 | Bore Gowda H S | 3401EC0002 | Government First Grade College, Hoovinahadagali, Bellary | 11-09-2009 | 20-07-1978 |
| 14 | 2393742 | Dr Somashekara D | 0905EC0001 | Government First Grade College, Piriyapatna | 25-09-2009 | 19-12-1975 |
| 15 | 2440294 | Mallikarjun Naik | 1501EC0012 | Government First Grade College, Sriramanagara (Koppala) | 14-09-2009 | 01-06-1976 |
| 16 | 9945856440 | Meenakshi | 2802EC0002 | Government First Grade College, Indi, Bijapur | 05-09-2009 | 15-07-1972 |
| 17 | 2457944 | Pirajade Mahamadaslam | 3004EC0071 | Government First Grade College, Manki (Honnavara) | 20-12-2013 | 22-07-1978 |
| 18 | 02281512 | Shobha | 3304EC0001 | Government First Grade College, Surapur | 07-09-2009 | 13-04-1974 |
| 19 | 209991 | Subramanya M S | 1101EC0001 | Government First Grade College, K R Pete | 05-09-2009 | 24-11-1979 |
| 20 | 4016200 | Archana S | 0600EC0001 | Government First Grade College, Chikkaballapura | 08-06-2022 | 30-06-1985 |
| 21 | 100819083 | Smitha T R | 1706EC0001 | Government First Grade College, Nyamathi | 05-09-2009 | 10-08-1982 |

| Sl. No. | KGID number | Name of the Employee | DDO Code | College name | date of entry into service | date of birth |
|---|---|---|---|---|---|---|
| 22 | 4019048 | Anusha R Patil | 1500EC0002 | Government First Grade College, Koppala | 11-08-2022 | 17-02-2003 |
| 23 | 050000 | Mahabaleswar U S | 1401EC0002 | Sir MVGovt. Science College Bhadravathi | 24-12-2007 | 01-06-1975 |
| 24 | 02001263 | Manjula S | 2053EC0001 | Government First Grade College, Barkur | 05-09-2009 | 15-04-1979 |
| 25 | 07061974 | Gayathri K R | 3405EC0002 | Government First Grade College, Sanduru, Bellary | 08-07-2010 | 07-06-1974 |
| 26 | 00134679 | Jisha P | 0403EC9278 | Government First Grade College, Magadi | 28-01-2008 | 08-12-1982 |
| 27 | 1943999 | Hanumanthayya Pujar | 3403EC0001 | Government First Grade College, Kudligi | 08-02-2008 | 04-10-1974 |

ನಿಂ/DTE ~~HRMS~~.

R.P
12P-13
30/3/23.


ಕರ್ನಾಟಕ ಸರ್ಕಾರ

ಖಜಾನೆ ಆಯುಕ್ತರ ಕಾರ್ಯಾಲಯ

ರಾಷ್ಟ್ರೀಯ ಪಿಂಚಣಿ ಯೋಜನೆ ಘಟಕ, 5ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್ ಪ್ಯಾಲೇಸ್ ರಸ್ತೆ,ಬೆಂಗಳೂರು -560001. E-Mail ID :nps-cell@karnataka.gov.in, Phone No : 080-22864180, 22866405


ಸಂ: DoT/NPSoPRAN(Dot)/2/2023 ದಿನಾಂಕ:04.03.2023

ಆಯುಕ್ತರು,
ಉನ್ನತ ಶಿಕ್ಷಣ ಇಲಾಖೆ,
ಉನ್ನತ ಶಿಕ್ಷಣ ಸೌಧ,
ಶೇಷಾದ್ರಿ ರಸ್ತೆ,
ಬೆಂಗಳೂರು-560001

ಮಾನ್ಯರೇ,

ವಿಷಯ: ದಿನಾಂಕ: 01.04.2006 ರಂದು ಮತ್ತು ತದನಂತರ ಸೇವೆಗೆ ಸೇರಿರುವ ಎನ್.ಪಿ.ಎಸ್ ನೌಕರರು ಪ್ರಾನ್ ಸಂಖ್ಯೆ ಹೊಂದಿಲ್ಲದಿರುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: FD (spl) 04 PET 2005 ದಿನಾಂಕ: 31.03.2006

2. ಸರ್ಕಾರದ ಸುತ್ತೋಲೆ ಸಂಖ್ಯೆ: FD (spl) 1 PEN 2010 ದಿನಾಂಕ: 10.01.2012

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 01.04.2006 ರಂದು ಮತ್ತು ತದನಂತರ ರಾಜ್ಯ ಸರ್ಕಾರದ ಸೇವೆಗೆ ಸೇರುವ ಎಲ್ಲಾ ಅಧಿಕಾರಿ/ನೌಕರರಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಉಲ್ಲೇಖ (1) ರ ಸರ್ಕಾರದ ಆದೇಶದ ಅನ್ವಯ ಜಾರಿಗೊಳಿಸಲಾಗಿದೆ.

ಉಲ್ಲೇಖ (2) ಸರ್ಕಾರದ ಸುತ್ತೋಲೆಯಲ್ಲಿ ಹೊಸದಾಗಿ ಸೇವೆಗೆ ಸೇರುವ ಎನ್.ಪಿ.ಎಸ್ ನೌಕರರು ಸೇವೆಗೆ ಸೇರಿದ ಒಂದು ತಿಂಗಳ ಅವಧಿಯಲ್ಲಿ ಪ್ರಾನ್ ಸಂಖ್ಯೆ ಪಡೆದು ಕಡ್ಡಾಯವಾಗಿ ಪ್ರಥಮ ವೇತನವನ್ನು ಎನ್.ಪಿ.ಎಸ್ ವಂತಿಗೆ ಕಟಾವಣೆಯೊಂದಿಗೆ ಸೆಳೆಯಬೇಕು ಎಂದು ಆದೇಶಿಸಲಾಗಿದೆ. ತಮ್ಮ ಅಧೀನದ ನೌಕರರು ಸೇವೆಗೆ ಸೇರಿದ ಒಂದು ತಿಂಗಳ ಅವಧಿಯಲ್ಲಿ ಪ್ರಾನ್ ಸಂಖ್ಯೆ ಪಡೆಯುವಂತೆ ಕ್ರಮಕೈಗೊಳ್ಳುವುದು ಸಂಬಂಧಿಸಿದ ಡಿಡಿಓರವರ ಜವಾಬ್ದಾರಿಯಾಗಿರುತ್ತದೆ.

ತಮ್ಮ ಇಲಾಖೆ ಅಧೀನದಲ್ಲಿ ಸುಮಾರು 76 ನೌಕರರು ಇಲ್ಲಿಯವರೆಗೆ ಪ್ರಾನ್ ಸಂಖ್ಯೆ ಪಡೆಯದೇ ವೇತನ ಸೆಳೆಯುತ್ತಿರುವುದು ಕಂಡು ಬಂದಿರುತ್ತದೆ. ನೌಕರರ ವೇತನದಿಂದ ಎನ್.ಪಿ.ಎಸ್ ವಂತಿಗೆ ಕಟಾವಣೆಯಾಗಿ ಸರ್ಕಾರದ 14% ಎನ್.ಪಿ.ಎಸ್ ವಂತಿಗೆಯೊಂದಿಗೆ ಪ್ರಾನ್ ಖಾತೆಗೆ ಜಮೆಯಾಗಿ, ಈ ಮೊತ್ತವು ವಿವಿಧ PFM ನಲ್ಲಿ ಹೂಡಿಕೆಯಾಗಿ ಪಿಂಚಣಿ ಕಾರ್ಪಸ್ ಮೊತ್ತದ ಸಂಗ್ರಹಣಯಾಗುತ್ತದ.

ಆದರೆ ಪ್ರಸ್ತುತ ಈ ಪತ್ರಕ್ಕೆ ಲಗತ್ತಿಸಿರುವ ಪಟ್ಟಿಯಲ್ಲಿರುವ ತಮ್ಮ ಇಲಾಖೆಯ ನೌಕರರ ಪ್ರಕರಣದಲ್ಲಿ ನೌಕರರು ಪ್ರಾನ್ ಸಂಖ್ಯೆ ಪಡೆದಿರುವುದಿಲ್ಲದ ಕಾರಣ ವೇತನದಿಂದ ಯಾವುದೇ ಎನ್.ಪಿ.ಎಸ್ ವಂತಿಗೆಯನ್ನು ಕಟಾವಣೆ ಮಾಡಿರುವುದಿಲ್ಲ. ನೌಕರರ ಎನ್.ಪಿ.ಎಸ್ ವಂತಿಗೆ ಕಟಾವಣೆಯಾಗದ ಕಾರಣ ಸದರಿ ಅವಧಿಗ

ಸರ್ಕಾರದ ಎನ್.ಪಿ.ಎಸ್ ವಂತಿಗೆಯು ಪಾವತಿಯಾಗಿರುವುದಿಲ್ಲ, ಇದರಿಂದ ನೌಕರರ ಪಿಂಚಣಿ ಕಾರ್ಪಸ್ ಸಂಗ್ರಹಣೆಯ ಮೊತ್ತವು ಇಳಿಕೆಯಾಗುತ್ತದೆ. ನಿವೃತ್ತಿ ಸಮಯದಲ್ಲಿ ಪಡೆಯುವ ಪಿಂಚಣಿ ಮೊತ್ತ ಸಹ ಕಡಿಮೆಯಾಗಿರುತ್ತದೆ ಎನ್.ಪಿ.ಎಸ್ ನೋಡಲ್ ಅಧಿಕಾರಿಯಾದ ಡಿಡಿಓರವರು ತಮ್ಮ ಅಧೀನದ ನೌಕರರಿಗೆ ಸಕಾಲದಲ್ಲಿ ಪ್ರಾನ್ ಸಂಖ್ಯೆ ಪಡೆಯಲು ಕ್ರಮವಹಿಸದ ಕಾರಣ ಈ ರೀತಿ ಉಂಟಾಗಿರುವ ನಷ್ಟಕ್ಕೆ ಸಂಬಂಧಿಸಿದ ಡಿಡಿಓರವರೇ ನೇರ ಹೊಣೆಯಾಗಿರುತ್ತಾರೆ.

ಆದುದರಿಂದ ಈ ಪತ್ರದೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿರುವ ಕೆ.ಜಿ.ಐ.ಡಿ. ಸಂಖ್ಯೆ ಹೊಂದಿರುವ ನೌಕರರಿಗೆ, ನೌಕರರ ಭವಿಷ್ಯದ ಹಿತಾಸಕ್ತಿ ದೃಷ್ಟಿಯಿಂದ ತುರ್ತಾಗಿ ಪ್ರಾನ್ ಒದಗಿಸುವಂತೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಡಿಡಿಓಗಳಿಗೆ ನಿರ್ದೇಶನ ನೀಡಲು ಕೋರಿದೆ.

ತಮ್ಮ ನಂಬುಗೆಯ

ಖಜಾನೆ ಆಯುಕ್ತರು
ಖಜಾನೆ ಆಯುಕ್ತರ ಕಛೇರಿ
ಬೆಂಗಳೂರು